ಒಂದು ದಿನ ಆಘಾತ ಕಾದಿತ್ತು. ಪೇಪರುಗಳಲ್ಲಿ ಪ್ರಮುಖ ಸುದ್ದಿ. ಆ ಉದಯೋನ್ಮುಖ ನಟಿಯೊಡನೆ ಅವನು ನಿಶ್ಚಿತಾರ್ಥ ಮಾಡಿಕೊಂಡಿದ್ದ. ಅವನು ಮುಂದೆ ಫೋನಿಗೂ ಸಿಗಲಿಲ್ಲ. ಅದಕ್ಕಿಂತ ಹೆಚ್ಚೆಂದರೆ ಅವನು ನಟಿಸುತ್ತಿದ್ದ ಚಿತ್ರಗಳಲ್ಲಿ ನಾನೂ ನಟಿಸಿದರೆ ಅವನ ಏಕಾಗ್ರತೆ ಕಡಿಮೆಯಾಗುತ್ತದಂತೆ. ನಾನಿರಕೂಡದು ಅಂತಲೇ ಅವನ ಕಂಡಿಷನ್. ನನಗೆ ಆಫರುಗಳು ಕಡಿಮೆಯಾದವು.

ಒಂದು ದಿನ ಹಳೆಯ ನಿರ್ಮಾಪಕ ನನಗೊಂದು ನೋಟಿಸ್ ಕಳಿಸಿದ. ನನ್ನ ಮನೆ ಹಣಕಾಸು ಲೇವಾದೇವಿದಾರರಿಗೆ ಒಂದು ಕೋಟಿ ರೂಪಾಯಿಗೆ ಒತ್ತೆಯಾಗಿದೆ. ಹದಿನೈದು ದಿನಗಳಲ್ಲಿ ಕೋಟಿ ರೂಪಾಯಿ ಪಾವತಿಸಿ, ಅಥವಾ ಮನೆ ಖಾಲಿ ಮಾಡಿ ಎಂದು. ಆಕಾಶವೇ ಕಳಚಿ ನನ್ನ ತಲೆ ಮೇಲೆ ಬಿತ್ತು. ಕಗ್ಗತ್ತಲ ರಾತ್ರಿಯ ಕಬಂಧ ಬಾಹುಗಳು ನನ್ನನ್ನು ಸುತ್ತುವರೆದವು. ನಾನು ಮನೆಯನ್ನು ಭದ್ರತೆಯಾಗಿ ನೀಡುವಾಗ ಇದೇ ನಿರ್ಮಾಪಕ ಇದು ಕೇವಲ ವ್ಯವಹಾರದ ಭದ್ರತೆ ಅಷ್ಟೇ ಅಂದಿದ್ದ. ಆ ಚಿತ್ರ ಲಾಭ ಗಳಿಸಿದ್ದೂ ಗೊತ್ತು. ಆದರೆ, ಈಗ ನಷ್ಟವಾಯಿತು ಅನ್ನುತ್ತಿದ್ದಾನೆ.

ಉಳಿದ ಹದಿನೈದು ದಿನಗಳಲ್ಲಿ ಕೋರ್ಟು, ಕಚೇರಿ, ಸಮನ್ಸ್‌ಗಳಷ್ಟೇ ಅಲ್ಲ, ಹಲವಾರು ರೌಡಿಗಳೂ ಫೋನಿನಲ್ಲಿ ಬೆದರಿಸಿದರು. ಒಂಟಿ ಹೆಣ್ಣು. ಮಾಜಿ ಪ್ರಸಿದ್ಧ ನಟಿ. ಆದರೂ, ಬದುಕು ಮೂರಾಬಟ್ಟೆಯಾಯಿತು. ಪೊಲೀಸರ ಸಹಾಯ ಯಾಚಿಸಿದ್ದೇ ಬಂತು. ತಾತ್ಕಾಲಿಕ ಪರಿಹಾರ ಅಷ್ಟೆ. ಶಾಶ್ವತ ಪರಿಹಾರ ಕಾಣಲೇ ಇಲ್ಲ. ಅಂಥ ವಿಷಮ ಸಮಯದಲ್ಲಿ, ಪ್ರಿಯ ಗೆಳೆಯ, ಪೊಲೀಸ್ ಅಧಿಕಾರಿಯೊಬ್ಬ ಕುಮಾರಣ್ಣನ ಪ್ರೈವೇಟ್ ನಂಬರ್ ನೀಡಿ ಉಪಕರಿಸಿದ್ದ. ಕುಮಾರಣ್ಣನ ಕೈ ಕಾಲು ಹಿಡಿದಾದರೂ ಸರಿ. ಈ ವಂಚನೆಯ ಚಕ್ರವ್ಯೂಹದಿಂದ ಹೊರಬರಲೇ ಬೇಕು.

'ಅವರು ಪ್ರಸಿದ್ಧ ನಟರು. ಅಲ್ಲದೆ, ನೀವು ಕೊಟ್ಟಿರುವ ಶ್ಯೂರಿಟಿ ಪತ್ರದಲ್ಲಿ ಅವರ ಹೆಸರೇ ಇಲ್ಲ. ನಿಮ್ಮ ದೂರನ್ನು ಹೇಗೆ ಸ್ವೀಕರಿಸಲಮ್ಮಾ' ಎಂದಿದ್ದರು ಪೊಲೀಸರು.

'ಅವರನ್ನು ಕರೆಸಿ ಸರ್, ಅವರೇ ಎಲ್ಲ ಹೇಳ್ತಾರೆ' ಎಂದೆ. ಆದರೆ, ಅವನು ಬರಲಿಲ್ಲ. ತನಗೂ, ಈ ವ್ಯವಹಾರಕ್ಕೂ ಯಾವುದೇ ಸಂಬಂಧವಿಲ್ಲವೆಂದು ಲಾಯರ್ ಮೂಲಕವೇ ಉತ್ತರಿಸಿದ್ದ.

ಇದು ನ್ಯಾಯ ಸಿದ್ಧ ಮಾರ್ಗದಿಂದ ಸಾಧ್ಯವಾಗದ ಕೆಲಸ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಕುಮಾರಣ್ಣನನ್ನು ಕೇಳಬೇಕು. ತೀರಾ, ಅವನ ಮುಂದೆ ಅಸಹಾಯಕಳೂ ಆಗಬಾರದು. ನನ್ನ ನಟನೆಗೆ ಈಗ ಪರೀಕ್ಷೆಯ ಕಾಲ. ಅವಳು ಬೆಳಗಿನ ಎಂಟು ಗಂಟೆಗಾಗಿ ಕಾದಳು.

★★★

ನಾನು ಕುಮಾರಣ್ಣನ ಮುಂದೆ ಕುಳಿತು ಮುಖ ಮುಚ್ಚಿದ್ದ ಬುರ್ಖಾದ ತೆರೆಯನ್ನು ಸರಿಸಿದಾಗ, ನಾನು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಆಶ್ಚರ್ಯ ಅವನಿಗಾಯಿತು.

ಅತ್ಯಂತ ಮೆಲು ದನಿಯಲ್ಲಿ 'ನೀವು!' ಅಂದ.

'ನೀವು ಅಲ್ಲ ಕುಮಾರಣ್ಣ, ನೀನು. ನಿನ್ನನ್ನು ಅಣ್ಣಾ ಎಂದಿದ್ದೇನೆ. ನಾನು ಒಂದು ಕಾಲದ ಪ್ರಸಿದ್ಧ ನಟಿ ಇರಬಹುದು. ನನ್ನ ದಡ್ಡತನದಿಂದ ಈ ಕಷ್ಟಕ್ಕೆ ಸಿಕ್ಕಿ ಕೊಂಡಿದ್ದೇನೆ. ನಿನ್ನನ್ನು ಹೊರತುಪಡಿಸಿ ಯಾರೂ ನನಗೆ ಸಹಾಯ ಮಾಡಲಾರರು.'

ಅವನಿಗೆ ನನ್ನ ಕತೆಯೆಲ್ಲ ಹೇಳಿದೆ. ಅವನ ಫೀಸ್ ಎಷ್ಟಾದರೂ ಕೊಡುತ್ತೇನೆ ಎಂದೆ.

'ಹಣದ ವಿಚಾರ ಒತ್ತಟ್ಟಿಗಿರಲಿ, ಈಗ ನಿಮ್ಮ ಕೈಯಲ್ಲಿ ಎಷ್ಟು ಚಿತ್ರ ಇದೆ?' ಅಂದ. ಅಷ್ಟಿ